**ಎರಡನೇ ಅಪರ ಸಿವಿಲ್ ನ್ಯಾಯಾಲಯ ಮತ್ತು ಜೆ. ಎಂ.ಎಫ್. ಸಿ, ಕನಕಪುರ**
**C.C. 917/2020**
**CW3 PW3**

| | | |
|---|---|---|
| ಹೆಸರು | : | ಶ್ರೀನಿವಾಸ್ |
| ತಂದೆಯ ಹೆಸರು | : | ಚಿನ್ನಗಿರಿಗೌಡ |
| ವಯಸ್ಸು | : | 47 |
| ಉದ್ಯೋಗ | : | ವ್ಯವಸಾಯ |
| ವಾಸ | : | ನಾರಾಯಣಪುರ |

**ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ಯವರಿಂದಃ ದಿನಾಂಕ 27.06.2026.**

ನ್ಯಾಯಾಲಯ ಮುಂದಿರುವ ಆರೋಪಿತರು ಗೊತ್ತು. ಚಾಸಾ-1 ಮತ್ತು 2 ನನ್ನ ಸ್ನೇಹಿತರು , ಚಾಸಾ- 4 ರಿಂದ 6 ಗೊತ್ತು .

ಸುಮಾರು5-6 ವರ್ಷಗಳ ಹಿಂದೆ ಚಾಸಾ-2, ಚಾಸಾ-4 ಮತ್ತು ಆರೋಪಿ1 ರವರು ಚಾಸಾ-2 ರವರ ಮನೆಯ ಬಳಿ ಜಗಳವಾಡುತ್ತಿದ್ದರು. ನಾನು ಬಿಡಿಸಲು ಹೋದಾಗ ಆರೋಪಿ 4 ರವರು ನನಗೆ ದೊಣ್ಣೆಯಿಂದ ಎಡಗೈಗೆ ಹೊಡೆದಿರುತ್ತಾರೆ. ನಂತರ ಚಾಸಾ-2 ರವರು ನನ್ನನ್ನು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿರುತ್ತಾರೆ .

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸ.ಸ.ಅ. ರವರು ಅನುಮತಿ ಕೋರಿದ್ದಾರೆ. ಅನುಮತಿಸಲಾಯಿತು).

**ಪಾಟೀ ಸವಾಲು : ಎ ಪಿ ಪಿ ಯವರಿಂದಃ**

ದಿನಾಂಕಃ 20.01.2020 ರಂದು ಗಲಾಟೆ ಆಗಿರುತ್ತದೆ ಎಂದರೆ ಸರಿ . ಹಣಂ ವಿಚಾರವಾಗಿ ಗಲಾಟೆ ಆಗಿರುತ್ತದೆ. ಚಾಸಾ-2 ರವರು ಅರೋಪಿ 1 ರವರಿಗೆ ಹಣ ಪಡೆದು 4 ವರ್ಷ ವಾಗಿದೆ , ಇನ್ನೂ ವಾಪಸ್ ಕೊಟ್ಟಿಲ್ಲ ಎಂದು ಬೈಯುತ್ತಿದ್ದರು ಎಂದರೆ ಸರಿ . ನಂತರ ಇತರ ಆರೋಪಿ ತರು ಸ್ಥಳಕ್ಕೆ ಬಂದು ಚಾಸಾ-2 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಹೊಡೆದಿರುತ್ತಾರೆ ಎಂದರೆ ಸರಿ . ನಂತರ ಜಗಳ ಬಿಡಿಸಲು ನೀವು ಮತ್ತು ಚಾಸಾ-1 ರವರು ಸ್ಥಳಕ್ಕೆ ಹೋಗಿರುತ್ತೀರಿ , ಆಗ 4 ನೇ ಆರೋಪಿ ನಿಮಗೆ ದೊಣ್ಣೆಯಿಂದ ಬಲಗೈಗೆ ಹೊಡೆದಿರುತ್ತಾರೆ ಎಂದರೆ ಸರಿ . 1 ನೇ ಆರೋಪಿ ಚಾಸಾ-1 ರವರಿಗೆ ದೊಣ್ಣೆಯಿಂದ ಬಲಗೈ ಮತ್ತು ಬಲ ಗಾಲಿಗೆ ಹೊಡೆದು ಗಾಯ ಪಡಿಸಿರುತ್ತಾರೆ ಎಂದರೆ ಸರಿ . ನಂತರ ಚಾಸಾ-4 ರವರು ಬಂದು ಜಗಳ ಬಿಡಿಸಿರುತ್ತಾರೆ. ಆರೋಪಿತರು ಹೋಗುವಾಗ ಇವತ್ತಲ್ಲ ನಾಳೆ ಚಾಸಾ-1 , 2 ಮತ್ತು ನಿಮ್ಮನ್ನು ಮುಗಿಸುವುದಾಗಿ ಪ್ರಾಣ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ . ಈ ರೀತಿ ನೀವು ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೀರಿಎಂದರೆ ಸರಿ .

ಸಾಕ್ಷಿ ನ್ಯಾಯಾಲಯದ ಮುಂದಿರುವ ಮು.ಮಾ. 1 ಮತ್ತು 2 ಅನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು: ಪಾಟೀ ಸವಾಲಿಗೆ ವಕೀಲರು ಸಮಯಾವಕಾಶ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ ಹೇ ಕೇ ಸ ಓ

ಎರಡನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಕನಕಪುರ